# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 332**

**ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 13.08.2025**

**ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಶುಸಂಗೋಪನ ಇಲಾಖೆ ವತಿಯಿಂದ ನಿರ್ವಹಿಸುತ್ತಿರುವ ಮೊಬೈಲ್ ವೆಟರಿನರಿ ಯುನಿಟ್ ಮೂಲಕ ಸಾಗಿಸಲಾದ ಪ್ರಾಣಿಗಳನ್ನು ಯಾವ ವೈದ್ಯರು ಚಿಕಿತ್ಸೆ ನೀಡಿದ್ದಾರೆ; (ಸದರಿ ವೈದ್ಯರ ಹೆಸರು ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು) | ಪಶುಸಂಗೋಪನೆ ಇಲಾಖೆ ವತಿಯಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳಲ್ಲಿ ಪ್ರಾಣಿಗಳನ್ನು ಸಾಗಿಸುವ ಸೌಲಭ್ಯವಿರುವುದಿಲ್ಲ.<br><br>ತುರ್ತು ಚಿಕಿತ್ಸೆ ಅವಶ್ಯವಿರುವ ಜಾನುವಾರು ಮಾಲೀಕರುಗಳು ಟೋಲ್ ಫ್ರೀ ಸಂಖ್ಯೆ 1962 ಗೆ ಕರೆ ಮಾಡಿದಾಗ ಸಹಾಯವಾಣಿಯಲ್ಲಿ ಕರ್ತವ್ಯ ನಿರ್ವಹಿಸುವ ಪಶುವೈದ್ಯರು ತುರ್ತು ಚಿಕಿತ್ಸೆಯ ತೀವ್ರತೆ /ಅಗತ್ಯತೆಯನ್ನು ನಿರ್ಧರಿಸಿ ಆದ್ಯತೆ ಮೇಲೆ ಸಂಬಂದಪಟ್ಟ ಜಿಲ್ಲೆಯ/ತಾಲ್ಲೂಕು/ಹೋಬಳಿಗಳ ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳಲ್ಲಿ ಕಾರ್ಯನಿರ್ವಹಿಸುವ ಪಶುವೈದ್ಯರುಗಳಿಗೆ ಕರೆಯನ್ನು ವರ್ಗಾಯಿಸುತ್ತಾರೆ.<br><br>ಸಂಚಾರಿ ಪಶು ವಾಹನದಲ್ಲಿರುವ ಪಶುವೈದ್ಯರುಗಳು ರೈತರ ಮನೆ ಬಾಗಿಲಿಗೆ ತೆರಳಿ, ತುರ್ತು ಚಿಕಿತ್ಸೆಯನ್ನು ಉಚಿತವಾಗಿ ಒದಗಿಸುತ್ತಾರೆ.<br><br>ದಿನಾಂಕ:05.08.2023 ರಿಂದ ಸದರಿ ಸೇವೆಗಳನ್ನು ಒದಗಿಸಲಾಗುತ್ತಿದ್ದು, ಇದುವರೆವಿಗೂ 638521 ರಾಸುಗಳಿಗೆ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳ ಮೂಲಕ ತುರ್ತು ಚಿಕಿತ್ಸೆ ಒದಗಿಸಲಾಗಿದೆ.<br><br>ಚಿಕಿತ್ಸೆ ನೀಡಿದ ವೈದ್ಯರ ವಿವರಗಳನ್ನು Pen Drive ನಲ್ಲಿ ಒದಗಿಸಲಾಗಿದೆ. |

<table>
<tr><td>ಆ)</td><td>ಕಳೆದ ಎರಡು ವರ್ಷದಲ್ಲಿ ಮೊಬೈಲ್ ವೆಟರಿನರಿ ಯುನಿಟ್ ನಿರ್ವಹಣೆಗೆ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ; (ವರ್ಷವಾರು, ಅಂಬುಲೆನ್ಸ್‌ವಾರು, ಜಿಲ್ಲಾವಾರು ವಿವರ ನೀಡುವುದು)</td><td>ಕಳೆದ ಎರಡು ವರ್ಷದಲ್ಲಿ ರಾಜ್ಯಾದ್ಯಂತ ಅಂಬುಲೆನ್ಸ್‌ಗಳಿಗೆ ನೀಡಲಾದ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚದ ಮೊತ್ತ ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ. ಸಂ</th><th>ವರ್ಷ</th><th>ಬಿಡುಗಡೆಯಾದ ಮೊತ್ತ (ಲಕ್ಷಗಳಲ್ಲಿ)</th><th>ವೆಚ್ಚಮಾಡಲಾದ ಮೊತ್ತ (ಲಕ್ಷಗಳಲ್ಲಿ)</th></tr>
<tr><td>1</td><td>2023-24</td><td>4071.13</td><td>4071.13</td></tr>
<tr><td>2</td><td>2024-25</td><td>4595.85</td><td>4562.66</td></tr>
</table>
ಅಂಬುಲೆನ್ಸ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸೇವಾ ಪೂರೈಕೆದಾರರನ್ನು LUMPSUM ಆಧಾರದಲ್ಲಿ ಆಯ್ಕೆ ಮಾಡಿರುವುದರಿಂದ ಸೇವಾ ಪೂರೈಕೆದಾರರಿಗೆ ಮಾಹೆವಾರು LUMPSUM ಆಧಾರದಲ್ಲಿ ನಿಯಮಾನುಸಾರ ಮೊತ್ತ ಪಾವತಿಸಲಾಗುತ್ತಿದ್ದು, ಆಂಬ್ಯುಲೆನ್ಸ್‌ವಾರು, ಜಿಲ್ಲಾವಾರು ಹಣ ಸಂದಾಯ ಮಾಡಿರುವುದಿಲ್ಲ.</td></tr>
<tr><td>ಇ)</td><td>ಮೊಬೈಲ್ ವೆಟರಿನರಿ ಯುನಿಟ್ ನಿರ್ವಹಣೆಯ ಟೆಂಡರ್ ಯಾವ ಸಂಸ್ಥೆಗೆ ನೀಡಲಾಗಿದೆ; (ಸದರಿ ಸಂಸ್ಥೆಯ ಹೆಸರು ಮತ್ತು ವಿಳಾಸ ಹಾಗೂ ಸಂಸ್ಥೆಯ ಮಾಲೀಕರ ಹೆಸರಿನೊಂದಿಗೆ ಸಮಗ್ರ ವಿವರ ನೀಡುವುದು)</td><td>ಮೊಬೈಲ್ ವೆಟರಿನರಿ ಯೂನಿಟ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಟೆಂಡರ್ ನಲ್ಲಿ ಆಯ್ಕೆಯಾದ ಪಾಲುದಾರಿಕಾ ಸಂಸ್ಥೆಯಾದ ಮೆ. ಎಡ್ಯುಸ್ಪಾರ್ಕ್ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ನೀಡಲಾಗಿದೆ. ಸದರಿ ಸಂಸ್ಥೆಯು Lead Partners ಆಗಿರುತ್ತದೆ.<br><br>M/s. Eduspark International Private Limited, No.501, 5th floor, Interface 11, off. Link Road, Malad (west), Mumbai-400 064 (Lead member).<br><br>M/s. Udbhav Educational And Rural Development Society (R.,)No 3B Ground Floor, 60 feet Road, Balarama Layout Raja Rajeshwari Nagar, Bangalore-560 098 (Consortium).<br><br>M/s Pashupatinath, Distributors Private Limited, F-2, 2nd Floor, Chandi, Vyapar Bhawan, Exhibition Road, Patna, (Bihar). Pin-800001.</td></tr>
<tr><td>ಈ)</td><td>ಕಳೆದ ಎರಡು ವರ್ಷಗಳಲ್ಲಿ ಮೊಬೈಲ್ ವೆಟರಿನರಿ ಯುನಿಟ್‌ನಲ್ಲಿ ಪ್ಯಾರವೆಟ್ ಗಳನ್ನು ಬಳಸಿರುವ ಔಷಧಿಗಳು ಮತ್ತು ಬಳಕೆ ಪದಾರ್ಥಗಳು ಹಾಗೂ ಎಲ್ಲಾ ತುರ್ತು ಸೇವೆಯ ಪ್ರಾಣಿಗಳ ನೋಂದಣಿ ಸಂಖ್ಯೆ ಎಷ್ಟು? (ವರದಿಯನ್ನು ಆಯಾಯ ವೆಟರಿನರಿ ವೈದ್ಯರು ಪ್ಯಾರವೆಟ್‌ಗಳ ಸಹಿಯೊಂದಿಗೆ ಮಾಹಿತಿ ನೀಡುವುದು)</td><td>ಸಂಚಾರಿ ಪಶು ಚಿಕಿತ್ಸಾ ವಾಹನಗಳ ಕಾರ್ಯಾಚರಣೆ 2023-24ನೇ ಸಾಲಿನಲ್ಲಿ ದಿನಾಂಕ:05.08.2023 ರಿಂದ ಪ್ರಾರಂಭಿಸಲಾಗಿದೆ.<br><br>ಕಳೆದ ಎರಡು ವರ್ಷಗಳಲ್ಲಿ ಪ್ರಾಣಿಗಳ ತುರ್ತು ಸೇವೆಗಾಗಿ ಸ್ವೀಕರಿಸಿದ ಕರೆಗಳ ಸಂಖ್ಯೆ ಚಿಕಿತ್ಸೆ ನೀಡಲಾದ ಪ್ರಾಣಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.
<table>
<tr><th>ವರ್ಷ</th><th>ತುರ್ತು ಚಿಕಿತ್ಸೆ ನೀಡಲಾದ ಪ್ರಾಣಿಗಳ ಸಂಖ್ಯೆ</th></tr>
<tr><td>2023-24</td><td>155443</td></tr>
<tr><td>2024-25</td><td>365398</td></tr>
</table></td></tr>
</table>

| | | |
|---|---|---|
| | | ಮೊಬೈಲ್ ವೆಟರಿನರಿ ಯೂನಿಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯರು, ಪ್ಯಾರವೆಟ್‌ಗಳು ನೀಡಿದ ಚಿಕಿತ್ಸೆಗೆ ಸಂಬಂಧಿಸಿದ ಅಂಬ್ಯುಲೆನ್ಸ್‌ವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |

**ಸಂಖ್ಯೆ:ಪಸಂಮೀ 169 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು